ಎಂ.ವಿ.ಸಿ.ನಂ. 166/24

ಪಿ.ಡಬ್ಲ್ಯು.1

(ಇಂದು ದಿನಾಂಕಃ 23-04-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 3 ನೇ ಎದುರುದಾರರ ಪರಃ ಶ್ರೀ ಎ.ಜಿ.ಎಚ್. ವಕೀಲರಿಂದಃ**

ನಾನು ಕಾರವಾರದ ಭಾಗ್ಯೋದಯ ಅಪಾರ್ಟಮೆಂಟನಲ್ಲಿ ವಾಸಿಸುತ್ತೇನೆ. ನಮ್ಮ ಮನೆಯಲ್ಲಿ ನಾನು ಒಬ್ಬಳೇ ಇರುತ್ತೇನೆ. ಇಂದು ನನ್ನ ಸಂಗಡ ನನ್ನ ಮಗಳು ಬಂದಿದ್ದು ಅವರು 3 ನೇ ಆರ್ಜಿದಾರರಾಗಿರುತ್ತಾರೆ. 1 ನೇ ಅರ್ಜಿದಾರರು ನನ್ನ ಗಂಡನಾಗಿದ್ದು ಅವರು ಬೆಂಗಳೂರಿನಲ್ಲಿ ಖಾಸಗಿ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಾರೆ. 3 ನೇ ಅರ್ಜಿದಾರರು ಮದುವೆಯಾಗಿ ಈಗ 3 ವರ್ಷಗಳು ಆಗಿವೆ. ಅವಳಿಗೆ ಒಂದು ಗಂಡು ಮಗು ಇದ್ದು ಮಗುವಿಗೆ ಒಂದುವರೆ ವರ್ಷ ವಯಸ್ಸಾಗಿರುತ್ತದೆ. 3 ನೇ ಅರ್ಜಿದಾರರ ಗಂಡ ಇವರು ಧಾರವಾಡದಲ್ಲಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ.

ನನ್ನ ಮಗ ಮೊಹಮ್ಮದ್ ಶಾರೀಕ್ ಅಪಘಾತವಾದ ದಿನ ಬಾಡಿಗೆ ಗಾಡಿಯಲ್ಲಿ ಪ್ರಯಾಣಿಸುತ್ತಿದ್ದರು. ಗಾಡಿಯ ಮಾಲಿಕರು ಯಾರು ಎಂದು ಅದರ ಬಗ್ಗೆ ಗೊತ್ತಿಲ್ಲ. ಅಪಘಾತವು ದಿನಾಂಕ 11-07-2020 ರಂದು ಆಗಿರುತ್ತದೆ. ನಾನು ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದು ಜನವರಿ 2024 ರಲ್ಲಿ ಎಂದರೆ ಸರಿ. ನಾನು 6 ತಿಂಗಳ ಒಳಗಡೆ ಅರ್ಜಿ ಸಲ್ಲಿಸದೇ ಇರುವ ಕಾರಣ ಅದು ಕಾನೂನುಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ.

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತದ ಕುರಿತು ಪೊಲೀಸರು ಹಾಗೂ ನನ್ನ ಪರಿಚಯದವರು ನನಗೆ ತಿಳಿಸಿದ್ದರು. ಬಾಡಿಗೆ ಕಾರಿನಲ್ಲಿ ನನ್ನ ಮಗ ಮತ್ತು ಅದರ ಚಾಲಕರು ಇದ್ದರು. ಪೊಲೀಸರಿಗೆ ಅಪಘಾತದ ಬಗ್ಗೆ ದೂರನ್ನು ನನ್ನ ಮಗಳು ಕೊಟ್ಟಿರಬಹುದು. ನನ್ನ ಮಗ ಪ್ರಯಾಣಿಸುತ್ತಿದ್ದ ಕಾರ್ ಚಾಲಕನ ವಿರುದ್ಧ ದೂರು ದಾಖಲಾಗಿರುತ್ತದೆ ಎಂದರೆ ಸರಿ. ಪೊಲೀಸರು ಅಪಘಾತದ ಬಗ್ಗೆ ನನ್ನ ಹೇಳಿಕೆ ಪಡೆದಿಲ್ಲ. ಪೊಲೀಸರು ಯಾರದೆಲ್ಲಾ ಹೇಳಿಕೆ ಪಡೆದುಕೊಂಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಆದರೆ ನನ್ನ ಮಗಳು ಹೇಳಿಕೆ ಕೊಟ್ಟಿದ್ದಾಳೆ. ಪೊಲೀಸರು ತನಿಖೆ ಮಾಡಿ ಕಾರ್ ಚಾಲಕನ ವಿರುದ್ಧ

ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ. ನಂತರ ಕ್ರಿಮಿನಲ್ ಪ್ರಕರಣ ಏನಾಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಅಪಘಾತದಲ್ಲಿ ಲಾರಿ ಚಾಲಕನ ತಪ್ಪು ಸಹ ಇದೆ ಎಂದರೆ ಸರಿಯಲ್ಲ. ನಮಗೆ ಪೊಲೀಸರು ಹೇಳಿದ ಪ್ರಕಾರ ಲಾರಿ ಚಾಲಕನು ಬ್ರೇಕ್ ಹಾಕಿದ್ದರಿಂದ ಹಿಂದುಗಡೆ ಇದ್ದ ನನ್ನ ಮಗನ ಕಾರ್ ಲಾರಿಯ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದ್ದರು ಎಂದು ಹೇಳಿರುತ್ತಾರೆ. ಲಾರಿ ಚಾಲಕನು ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ಲಾರಿ ಚಾಲಕನ ಅಜಾಗರೂಕತೆ ಮತ್ತು ನಿರ್ಲಕ್ಷತನದಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಕಾರ್ ಚಾಲಕನು ನನಗೆ ಪೋನ್ ಮಾಡಿ ಅವರ ತಪ್ಪಿನಿಂದ ಅಪಘಾತವಾಗಿದೆ ಎಂದು ನನಗೆ ಹೇಳಿದ್ದರು. ಸದರಿ ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿರುವುದರಿಂದ ಅವರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ಪೊಲೀಸರು ಕಾರ್ ಚಾಲಕನ ಮೇಲೆ ಪ್ರಕರಣ ದಾಖಲಿಸಿದ್ದರಿಂದ ಆ ಕಾರಣಕ್ಕೆ ನಾನು ಕಾರ್ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಹೇಗೆ ಸಂಭವಿಸಿತು ಎಂದು ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗನ ಜನ್ಮ ದಿನಾಂಕ 06-07-1999. ನನ್ನ ಮಗ ಪ್ರಾಥಮಿಕ ಶಾಲೆ ಮುಗಿದ ನಂತರ ಬಿ.ಸಿ.ಎ. ವ್ಯಾಸಂಗ ಮಾಡುತ್ತಿದ್ದನು ಹಾಗೂ ಎನಿಮೇಶನ್ ಕೋರ್ಸ ಮಾಡುತ್ತಿದ್ದನು. ನನ್ನ ಮಗನ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಹಾಜರು ಮಾಡಿದ್ದೇನೆ. ನಿ.ಪಿ.18 ನನ್ನ ಮಗ ಪಡೆದಿರಬೇಕು. ಅದನ್ನು ನಾನು ಹೋಗಿ ಪಡೆದಿಲ್ಲ. ಅದಕ್ಕೆ ಯಾರು ಸಹಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಪಘಾತವು ಬೆಂಗಳೂರಿನ ಶಿರಾ ಹತ್ತಿರ ಆಗಿತ್ತು. ಅಪಘಾತವಾದ ಸಮಯದಲ್ಲಿ ನನ್ನ ಮಗ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.18 ಸುಳ್ಳಾಗಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಎರೆನಾ ಎನಿಮೇಶನ್ಸ್ ನಲ್ಲಿ ನನ್ನ ಮಗ ಎಕ್ಸಪರ್ಟ ಆಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. L.E.E. Entertainment ಮಂಗಳೂರು ಇವರಿಂದ ಕಂಪನಿಯಲ್ಲಿ ಅವರಿಗೆ ಕೆಲಸದ

ಆಫರ್ ಬಂದಿತ್ತು ಹಾಗೂ ಮಾಸಿಕ ರೂ. 39,500-00 ಆಫರ್ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಎನಿಮೇಶನ್ ಮತ್ತು ಗ್ರಾಫಿಕ್ ಡಿಸೈನ್‌ನಲ್ಲಿ ಅವರಿಗೆ ತಿಂಗಳಿಗೆ ರೂ. 15,000-00 ಕ್ಕಿಂತ ಜಾಸ್ತಿ ಸಂಪಾದನೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಕೆಲಸ ಮತ್ತು ಸಂಪಾದನೆ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಮಾಸಿಕ ರೂ.10,000-00 ರಿಂದ 12,000-00 ಆದಾಯ ಇದೆ. ನನ್ನ ಮಗನ ಹೆಸರಿನಲ್ಲಿ ಯಾವುದೇ ವಿಮಾ ಪಾಲಿಸಿ ಇಲ್ಲ. ಆದರೆ ಬ್ಯಾಂಕ್ ಖಾತೆ ಇದೆ. ಮಗನ ಬ್ಯಾಂಕ್ ಖಾತೆಯ ಸ್ಟೇಟಮೆಂಟ್ ಹಾಜರು ಮಾಡಲು ತೊಂದರೆ ಇಲ್ಲ. ನನ್ನ ಮಗನ ಪಾನ್ ಕಾರ್ಡ ಇತ್ತು. ಆದರೆ ಅವನು ಆದಾಯ ತೆರಿಗೆ ಪಾವತಿ ಮಾಡುತ್ತಿರಲಿಲ್ಲ. ನನ್ನ ಮಗನಿಗೆ ಯಾವುದೇ ಆದಾಯ ಇರಲಿಲ್ಲ ಹಾಗೂ ನಾವು ಅವರ ಆದಾಯ ಅವಲಂಬಿಸಿರಲಿಲ್ಲ ಎಂದರೆ ಸರಿಯಲ್ಲ. 3 ನೇ ಅರ್ಜಿದಾರರು ಮದುವೆಯಾಗಿ ಗಂಡನ ಮನೆಯಲ್ಲಿ ಉಳಿದಿದ್ದರಿಂದ ಅವರು ನನ್ನ ಮಗನ ಆದಾಯದ ಮೇಲೆ ಅವಲಂಬಿಸಿರಲಿಲ್ಲ ಎಂದರೆ ಸರಿಯಲ್ಲ. ಬಾಡಿಗೆ ಕಾರ್ ನನ್ನ ಮಗನಿಗೆ ಗುರುತು ಇದ್ದವರದ್ದು ಆಗಿರುತ್ತದೆ. ಕಾರ್ ಚಾಲಕನಿಗೆ ಡಿ.ಎಲ್. ಇತ್ತು. ಆದರೆ ವಾಹನಕ್ಕೆ ವಿಮಾ ಪಾಲಿಸಿ ಇತ್ತೋ ಇಲ್ಲವೋ ಎಂದು ನನಗೆ ಮಾಹಿತಿ ಇಲ್ಲ. ವಾಹನಕ್ಕೆ ಪರ್ಮಿಟ್ ಇರಬೇಕಾಗುತ್ತದೆ ಹಾಗೂ ಫಿಟ್‌ನೆಸ್ ಸರ್ಟಿಫಿಕೇಟ್ ಇರಬೇಕಾಗುತ್ತದೆ ಎಂದರೆ ಇರಬಹುದು. ಸದರಿ ಕಾರಿಗೆ ಅಪಘಾತದ ಸಮಯದಲ್ಲಿ ಫಿಟ್‌ನೆಸ್ ಸರ್ಟಿಫಿಕೇಟ್ ಇರಲಿಲ್ಲ ಎಂದು ನನಗೆ ಮಾಹಿತಿ ಇರಲಿಲ್ಲ. ಕಾರಿಗೆ ಸರಿಯಾದ ದಾಖಲಾತಿಗಳು ಇಲ್ಲದೇ ಇರುವ ಕಾರಣ ವಿಮಾ ಪಾಲಿಸಿಯ ನಿಯಮಗಳು ಉಲ್ಲಂಘನೆಯಾಗಿದ್ದು ಆ ಕಾರಣ 3 ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನಗೆ ಸರಿಯಾದ ಮಾಹಿತಿ ಇಲ್ಲದಿದ್ದರೂ ಸಹ ಅಪಘಾತದ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಂ.ವಿ.ಸಿ.ನಂ. 166/24
ಪಿ.ಡಬ್ಲ್ಯು.1

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ